# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **1770** |
| ಸದಸ್ಯರ ಹೆಸರು | : | ಡಾ: ಎಂ.ಜಿ.ಮುಳೆ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23-03-2026 |
| ಉತ್ತರಿಸುವ ಸಚಿವರು | | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ಎಷ್ಟು ಗೃಹ ಬಳಕೆದಾರರಿಗೆ ಮತ್ತು ಎಷ್ಟು ವಾಣಿಜ್ಯ ಮಳಿಗೆಗಳಿಗೆ ಸ್ಮಾರ್ಟ್ ಮೀಟರ್ (Smart Meters) ಅಳವಡಿಸಿಲಾಗಿದೆ: ಈ ಯೋಜನೆ ಜಾರಿಗೆ ತಂದಿರುವ ಒಟ್ಟು ವೆಚ್ಚ ಎಷ್ಟು: (ತಾಲ್ಲೂಕುವಾರು ಮಾಹಿತಿ ನೀಡುವುದು): | ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಇದುವರೆಗೆ ಯಾವುದೇ ಸ್ಥಾವರಕ್ಕೆ (ಗೃಹ ಬಳಕೆ ಮತ್ತು ವಾಣಿಜ್ಯ ಮಳಿಗೆ ಸೇರಿದಂತೆ) Smart Meters ಗಳನ್ನು ಅಳವಡಿಸಿರುವುದಿಲ್ಲ.<br><br>KERC ಆದೇಶದಂತೆ ಜೆಸ್ಕಾಂ ವ್ಯಾಪ್ತಿಯಲ್ಲಿ ಎಲ್ಲಾ ಹೊಸ ಸಂಪರ್ಕಗಳಿಗೆ ಹಾಗೂ ತಾತ್ಕಾಲಿಕ ಸಂಪರ್ಕಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಲು ದಿನಾಂಕ 5.2.2026 ರಂದು ಕಾರ್ಯಾದೇಶ ನೀಡಲಾಗಿದ್ದು, ದಿನಾಂಕ 2.3.2026 ರಿಂದ ಕಡ್ಡಾಯವಾಗಿ ಸ್ಮಾರ್ಟ್ ಮೀಟರ್ ಅಳವಡಿಸಲಾಗುತ್ತಿದೆ.<br><br>KERC ನಿರ್ದೇಶನದಂತೆ Smart Meters ಗಳನ್ನು ಗ್ರಾಹಕರೇ ವಿದ್ಯುತ್ ಸರಬರಾಜು ಕಂಪನಿಗಳ ಅಧಿಕೃತ Retail outlet ಗಳಿಂದ ಖರೀದಿಸಬೇಕಾಗಿರುತ್ತದೆ.<br><br>ಸ್ಮಾರ್ಟ್ ಮೀಟರ್ ಗಳ ಲಭ್ಯತೆಗಾಗಿ ಜೆಸ್ಕಾಂ ನಲ್ಲಿ ಟೆಂಡರ್ ಕರೆದು ಪ್ರತಿ ವಿಭಾಗ ಮಟ್ಟದಲ್ಲಿ ಸ್ಮಾರ್ಟ್ ಮೀಟರ್ ಮಳಿಗೆ (Retail outlet) ತೆರೆಯಲು ಅನುಮತಿ ನೀಡಲಾಗಿರುತ್ತದೆ. ಜೆಸ್ಕಾಂ ವ್ಯಾಪ್ತಿಯಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಗೆ ನಿಗಧಿ ಪಡಿಸಿರುವ ದರಗಳ ವಿವರಗಳು ಈ ಕೆಳಗಿನಂತಿವೆ. |

| ವಿವರ | ದರ ರೂ. ಗಳಲ್ಲಿ (ಜಿ.ಎಸ್.ಟಿ. ಸೇರಿದಂತೆ) |
|---|---|
| ಸಿಂಗಲ್ ಫೇಸ್ ಸ್ಮಾರ್ಟ್ ಮೀಟರ್ (with box) | 4983.00 |
| ತ್ರೀ ಫೇಸ್ ಸ್ಮಾರ್ಟ್ ಮೀಟರ್ (with box) | 8800.00 |
| ತ್ರೀ ಫೇಸ್ ಸಿ.ಟಿ.(CT) ಅಪರೇಟೆಡ್ ಸ್ಮಾರ್ಟ್ ಮೀಟರ್(with box) | 27500.00 |

ಮುಂದುವರೆದು ಸ್ಮಾರ್ಟ್ ಮೀಟರ್ ಅಳವಡಿಕೆಗೆ ಪ್ರತ್ಯೇಕವಾದ ಯೋಜನೆ ಇರುವುದಿಲ್ಲ.

| | | |
|---|---|---|
| ಆ) | ಸ್ಮಾರ್ಟ್ ಮೀಟರ್ ಅಳವಡಿಕೆಯ ನಂತರ ವಿದ್ಯುತ್ ಬಿಲ್ ಮೊತ್ತದಲ್ಲಿ ಅಸಹಜ ಏರಿಕೆ ಕಂಡುಬಂದಿದೆ ಎಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ: ಜಿಲ್ಲೆಯಲ್ಲಿ ದಾಖಲಾದ ಒಟ್ಟು ದೂರುಗಳ ಸಂಖ್ಯೆ ಎಷ್ಟು: ಈ ದೂರುಗಳನ್ನು ಇತ್ಯರ್ಥಪಡಿಸಲು Gulbarga Electricity Supply Company Limited (GESCOM) ಅಧಿಕಾರಿಗಳು ಕೈಗೊಂಡಿರುವ ಕ್ರಮಗಳ ವಿವರವೇನು : | ಜೆಸ್ಕಾಂ ವ್ಯಾಪ್ತಿಯ ಬೀದರ್ ಜಿಲ್ಲೆಯಲ್ಲಿ ಇದುವರೆಗೆ ಸ್ಮಾರ್ಟ್ ಮೀಟರ್ ಅಳವಡಿಸಿರುವುದಿಲ್ಲ, ವಿದ್ಯುತ್ ಬಿಲ್ಲಿನ ಅಸಹಜ ಏರಿಕೆ ಸಂಬಂಧ ಪ್ರಸ್ತುತ ದೂರುಗಳು ಬಂದಿರುವುದಿಲ್ಲ.<br><br>ಮುಂದಿನ ದಿನಗಳಲ್ಲಿ ಬಿಲ್ಲಿನ ಕುರಿತು ದೂರುಗಳು ಬಂದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |
| ಇ) | ಸ್ಮಾರ್ಟ್ ಮೀಟರ್‌ಗಳಲ್ಲಿ ಉಂಟಾಗಬಹುದಾದ ತಾಂತ್ರಿಕ ದೋಷಗಳು ಅಥವಾ ಬಿಲ್ಲಿಂಗ್ ಸಾಫ್ಟ್‌ವೇರ್ ಲೋಪಗಳನ್ನು ಪರಿಶೀಲಿಸಲು ಸರ್ಕಾರಿ ಸ್ವಾಮ್ಯದ 'ಸ್ವತಂತ್ರ ಮೀಟರ್ ಪರೀಕ್ಷಾ ಪ್ರಯೋಗಾಲಯ' (Independent Meter Testing Lab)ವ್ಯವಸ್ಥೆ ಬೀದರ್ ಜಿಲ್ಲೆಯಲ್ಲಿ ಇದೆಯೇ: ಇಲ್ಲದಿದ್ದರೆ, ಸಮೀಪದ ಜಿಲ್ಲೆಯಲ್ಲಿ ಲಭ್ಯವಿರುವ ಸೌಲಭ್ಯ ಯಾವುದು: | ಸ್ಮಾರ್ಟ್ ಮೀಟರ್‌ಗಳಲ್ಲಿ ಉಂಟಾಗಬಹುದಾದ ತಾಂತ್ರಿಕ ದೋಷಗಳನ್ನು ಪರಿಶೀಲಿಸಲು ಸರ್ಕಾರಿ ಸ್ವಾಮ್ಯದ 'ಸ್ಮಾರ್ಟ್ ಮೀಟರ್‌ಪರೀಕ್ಷಾ ಪ್ರಯೋಗಾಲಯ' (Smart Meter Testing Lab) ವ್ಯವಸ್ಥೆ ಪ್ರಸ್ತುತ ಬೀದರ್ ಜಿಲ್ಲೆಯಲ್ಲಿ ಇರುವುದಿಲ್ಲ.<br><br>ಮುಂದುವರೆದು ಜೆಸ್ಕಾಂ ವ್ಯಾಪ್ತಿಯಲ್ಲಿ ಸ್ಮಾರ್ಟ್ ಮೀಟರ್ ಟೆಸ್ಟ್ ಬೆಂಚ್ ನ್ನು ಸ್ಥಾಪಿಸಲು ಮೆ. ಝುರಾ ಇಂಡಿಯಾ ಪ್ರೈ. ಲಿ., ಗುಜರಾತ್ ಇವರಿಗೆ ದಿನಾಂಕ 13.02.2026 ರಂದು ಖರೀದಿ ಆದೇಶ ನೀಡಲಾಗಿದ್ದು, ಕಲಬುರಗಿ, ರಾಯಚೂರು ಮತ್ತು ಬಳ್ಳಾರಿ ನಗರಗಳಲ್ಲಿ ಸ್ಮಾರ್ಟ್ ಮೀಟರ್ ಟೆಸ್ಟ್ ಬೆಂಚ್ ಅಳವಡಿಸಲಾಗುತ್ತಿದೆ.<br>ಬೀದರ್ ಜಿಲ್ಲೆಯಲ್ಲಿ ಸ್ಮಾರ್ಟ್ ಮೀಟರ್ ಅಳವಡಿಸಿಕೊಂಡ ಗ್ರಾಹಕರು ಸ್ಮಾರ್ಟ್ ಮೀಟರ್ ನ ಪರೀಕ್ಷೆ ಅವಶ್ಯವಿದ್ದಲ್ಲಿ ಸಮೀಪದ ಕಲಬುರಗಿ ನಗರದಲ್ಲಿ ಸ್ಥಾಪಿಸಲಾಗುವ ಸ್ಮಾರ್ಟ್ ಮೀಟರ್ ಟೆಸ್ಟ್ ಬೆಂಚ್ ನ ಸೌಲಭ್ಯ ಪಡೆಯಬಹುದಾಗಿರುತ್ತದೆ. |
| ಈ) | ರೈತರಿಗೆ ಗುಣಮಟ್ಟದ ಹಾಗೂ ನಿರಂತರ ವಿದ್ಯುತ್ ಪೂರೈಕೆ ನೀಡುವ ಉದ್ದೇಶದಿಂದ ಜಾರಿಗೆ ತರಲಾಗುತ್ತಿರುವ 'ಪ್ರತ್ಯೇಕ ಕೃಷಿ ಫೀಡರ್ (Agriculture Feeder Bifurcation) ಯೋಜನೆ ಬೀದರ್ ಜಿಲ್ಲೆಯ ಎಷ್ಟು | ಬೀದರ್ ಜಿಲ್ಲೆಯಲ್ಲಿ ಒಟ್ಟು 186 ಸಂಖ್ಯೆಯ 'ಪ್ರತ್ಯೇಕ ಕೃಷಿ ಫೀಡರ್'ಗಳು ಇದ್ದು, ತಾಲೂಕುವಾರು ವಿವರ ಕೆಳಗಿನಂತಿವೆ: |

| ಕ್ರ ಸಂ | ತಾಲೂಕು | ಪ್ರತ್ಯೇಕ ಕೃಷಿ ಫೀಡರ್ ಸಂಖ್ಯೆ | ಪೂರ್ಣಗೊಂಡಿರುವ ಗ್ರಾಮಗಳ ಸಂಖ್ಯೆ | ಬಾಕಿ ಇರುವ ಗ್ರಾಮಗಳ ಸಂಖ್ಯೆ |
|---|---|---|---|---|
| 1 | ಔರಾದ | 28 | 152 | 0 |

<table>
<tr>
<td></td>
<td>ಗ್ರಾಮಗಳಲ್ಲಿ ಪೂರ್ಣಗೊಂಡಿದೆ: ಇನ್ನೂ ಎಷ್ಟು ಗ್ರಾಮಗಳಲ್ಲಿ ಕಾಮಗಾರಿ ಬಾಕಿ ಉಳಿದಿದೆ: (ತಾಲ್ಲೂಕುವಾರು ಪಟ್ಟಿ ನೀಡುವುದು)</td>
<td>
<table>
<tr><td>2</td><td>ಭಾಲ್ಕಿ</td><td>40</td><td>133</td><td>0</td></tr>
<tr><td>3</td><td>ಬೀದರ್</td><td>40</td><td>151</td><td>0</td></tr>
<tr><td>4</td><td>ಹುಮನಾಬಾದ</td><td>24</td><td>66</td><td>0</td></tr>
<tr><td>5</td><td>ಬಸವಕಲ್ಯಾಣ</td><td>30</td><td>188</td><td>0</td></tr>
<tr><td>6</td><td>ಹುಲಸೂರ</td><td>6</td><td>40</td><td>0</td></tr>
<tr><td>7</td><td>ಚಿಟಗುಪ್ಪಾ</td><td>18</td><td>52</td><td>0</td></tr>
<tr><td colspan="2">ಬೀದರ್ ಜಿಲ್ಲೆ</td><td>186</td><td>782</td><td>0</td></tr>
</table>
</td>
</tr>
<tr>
<td>ಉ)</td>
<td>ಗ್ರಾಮೀಣ ಭಾಗಗಳಲ್ಲಿ ಟ್ರಾನ್ಸ್ ಫಾರ್ಮರ್ (TC) ಸುಟ್ಟುಹೋದಾಗ ಅಥವಾ ತಾಂತ್ರಿಕ ದೋಷ ಉಂಟಾದಾಗ 24 ಗಂಟೆಗಳೊಳಗೆ ದುರಸ್ತಿ ಮಾಡಲು ಜಿಲ್ಲಾ ಮಟ್ಟದಲ್ಲಿ 'ತುರ್ತು ಕಾರ್ಯಪಡೆ' (Emergency Response Team) ರಚಿಸಲಾಗಿದೆಯೇ: ಕಳೆದ ಒಂದು ವರ್ಷದಲ್ಲಿ ಎಷ್ಟು 'ಟ್ರಾನ್ಸ್ ಫಾರ್ಮರ್ ದುರಸ್ತಿ/ಬದಲಾವಣೆ ಕಾರ್ಯಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲಾಗಿದೆ?</td>
<td>KERC Standards of Performance (SoP) ಪ್ರಕಾರ ವಿದ್ಯುತ್ ಪರಿವರ್ತಕ ವಿಫಲಗೊಂಡಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ 72 ಗಂಟೆಗಳೊಳಗೆ ವಿಫಲಗೊಂಡ ಪರಿವರ್ತಕಗಳನ್ನು ಬದಲಾಯಿಸಲಾಗುತ್ತಿದೆ.<br><br>ಗ್ರಾಹಕರು ಪರಿವರ್ತಕ ವಿಫಲಗೊಂಡ ಮಾಹಿತಿಯನ್ನು ತುರ್ತಾಗಿ ನೀಡಲು TOLL FREE ನಂಬರ್ 1912 ಸೌಲಭ್ಯವನ್ನು ಕಲ್ಪಿಸಲಾಗಿದೆ ಹಾಗೂ ಸಂಬಂಧಿತ ಶಾಖಾಧಿಕಾರಿ/ಉಪ-ವಿಭಾಗಾಧಿಕಾರಿ ಯವರ ಮೊಬೈಲ್ ಸಂಖ್ಯೆಗೂ ಸಹ ಕರೆ ಮಾಡಿ ತಿಳಿಸಬಹುದಾಗಿರುತ್ತದೆ.<br><br>ವಿತರಣಾ ಪರಿವರ್ತಕ ಕೇಂದ್ರಗಳಲ್ಲಿ (Distribution Transformer Centre) ತಾಂತ್ರಿಕ ದೋಷ ಉಂಟಾದಾಗ ಪವರ್ ಮ್ಯಾನ್ ಹಾಗೂ ಸಂಬಂಧಪಟ್ಟ ಕ್ಷೇತ್ರ ಶಾಖಾಧಿಕಾರಿಯವರು ಪರಿಶೀಲಿಸಿ, ಸ್ಥಳದಲ್ಲಿಯೇ ತಾಂತ್ರಿಕ ದೋಷವನ್ನು ಸರಿಪಡಿಸುತ್ತಿರುತ್ತಾರೆ. ಆದರೆ ಪರಿವರ್ತಕ ವಿಫಲಗೊಂಡಲ್ಲಿ, ದುರಸ್ತಿ ಕೇಂದ್ರಗಳಲ್ಲಿ ದುರಸ್ತಿಗೊಳಿಸಲಾಗುತ್ತಿದೆ.<br><br>ವಿಫಲಗೊಂಡ ಪರಿವರ್ತಕಗಳನ್ನು ಶೀಘ್ರವಾಗಿ ದುರಸ್ತಿಗೊಳಿಸಲು ಅನುಕೂಲವಾಗುವಂತೆ ಬೀದರ್ ಜಿಲ್ಲೆಯಲ್ಲಿ ಒಟ್ಟು 06 ವಿದ್ಯುತ್ ಪರಿವರ್ತಕ ದುರಸ್ತಿ ಕೇಂದ್ರಗಳಿರುತ್ತವೆ.<br><br>ಮುಂದುವರೆದು, ಬೀದರ್ ಜಿಲ್ಲೆಯಲ್ಲಿ 2025-26 ನೇ ಸಾಲಿನ (ಫೆಬ್ರುವರಿ-2026 ರವರೆಗೆ) 3190 ಪರಿವರ್ತಕಗಳು ವಿಫಲಗೊಂಡಿದ್ದು, ಎಲ್ಲಾ ಪರಿವರ್ತಕಗಳನ್ನು ನಿಗದಿತ ಅವಧಿಯೊಳಗೆ ಬದಲಾಯಿಸಲಾಗಿದೆ.</td>
</tr>
</table>

ಸಂಖ್ಯೆ: ಎನರ್ಜಿ 88 ಇಬಿಎಸ್ 2026

**(ಕೆ.ಜೆ.ಜಾರ್ಜ್)**
ಇಂಧನ ಸಚಿವರು